# ನನ್ನ ನೇಪಾಳ ಪ್ರವಾಸದ ಅನುಭವಗಳು

**ಉಮಾ ನಾಯಕ್**

ನೇಪಾಳ ದೇಶದಲ್ಲಿ ಅನೇಕ ಹಿಂದೂ, ಬೌದ್ಧ ಕ್ಷೇತ್ರಗಳಿದ್ದು ಅಸಂಖ್ಯಾತ ಭಾರತೀಯ ಯಾತ್ರಿಕರ ಯಾತ್ರೆಯ ತಾಣವಾಗಿದೆ. ಹಿಮಾಲಯದ ಉನ್ನತ ಕಣಿವೆಯಗಳಲ್ಲಿರುವ ಈ ಕ್ಷೇತ್ರಗಳ ಸಂದರ್ಶನ ಅತ್ಯಂತ ಮನಮೋಹಕ ಅನುಭವವೂ ಆಗಿರುತ್ತದೆ. ನೇಪಾಳ ಯಾತ್ರೆಯ ತಮ್ಮ ಅನುಭವಗಳನ್ನು ವಿವರಿಸಿರುವ ಲೇಖಕಿ ಮೈಸೂರು ಆಶ್ರಮದ ಭಕ್ತರು.



ನನಗೆ ಮೊದಲಿನಿಂದಲೂ ಪ್ರವಾಸ ಮಾಡುವುದರಲ್ಲಿ ಒಲವು. 'ದೇಶ ಸುತ್ತು ಕೋಶ ಓದು' ಎಂಬ ನಾಣ್ನುಡಿಯಂತೆ ನಾನು ಭಾರತದ ಸುಮಾರು ಪ್ರೇಕ್ಷಣೀಯ ಸ್ಥಳಗಳ ಪ್ರವಾಸ ಮಾಡಿದ್ದೇನೆ. ಆಯಾ ಊರಿನ ಕಲೆ, ಸಂಪ್ರದಾಯ, ಜನರ ರೀತಿ ನೀತಿ ತಿಳಿಯಲು ನನಗೆ ಬಹಳ ಆಸಕ್ತಿ. ನಮ್ಮ ಭಾರತದ ಪ್ರತಿಯೊಂದು ರಾಜ್ಯವೂ ವಿಭಿನ್ನತೆಯಿಂದ ಕೂಡಿದ್ದು, ಒಂದರ ಹಾಗೆ ಒಂದಿಲ್ಲ. ಎಲ್ಲವೂ ವೈವಿಧ್ಯಮಯ. ಈ ಒಂದೊಂದು ವೈವಿಧ್ಯವೂ ಒಂದೊಂದು ಸೊಗಸು. ಅದನ್ನು ತಿಳಿಯಲೆಂದೇ ಸಾಕಷ್ಟು ಪ್ರವಾಸಗಳನ್ನು ಮಾಡಿದ್ದೇನೆ. ಹಾಗೆಯೇ ನೇಪಾಳವೂ ನನ್ನ ಪ್ರವಾಸಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿತ್ತು. ಅಲ್ಲಿಗೆ ಹೋಗಲು ಪಾಸ್‌ಪೋರ್ಟ್ ಅಥವಾ ವೀಸಾ ಏನೂ ಬೇಕಾಗಿಲ್ಲ.

ನೇಪಾಳ ಪ್ರವಾಸಕ್ಕೆ ಹೋಗುವ ಅವಕಾಶಕ್ಕಾಗಿ ಕಾಯುತ್ತಿದ್ದಾಗ, ಸುಮಾರು ಹನ್ನೆರಡು ವರ್ಷಗಳ ಹಿಂದೆ ಮಂಗಳೂರಿನ ನಿರ್ಮಲ ಟ್ರಾವೆಲ್ಸ್‌ನವರು ನೇಪಾಳ ಪ್ರವಾಸಕ್ಕೆ ಆಯೋಜಿಸಿದ್ದಾರೆಂದು ತಿಳಿದ ಕೂಡಲೇ ಹೊರಟುಬಿಟ್ಟೆ. ಬೆಂಗಳೂರಿನಿಂದ ದೆಹಲಿಗೆ ರೈಲಿನಲ್ಲಿ ಪ್ರಯಾಣ ಮಾಡಿ ಅಲ್ಲಿಂದ ಬಸ್ಸಿನಲ್ಲಿ ನೇಪಾಳಕ್ಕೆ ಹೋದೆವು. ಭಾರತ ಮತ್ತು ನೇಪಾಳಕ್ಕೆ ಒಂದು ಗಡಿ ಪ್ರದೇಶವಿದೆ. ಅಲ್ಲಿನ ಚೆಕ್‌ಪೋಸ್ಟಿನಲ್ಲಿ ತಪಾಸಣೆ ಮಾಡಿ ನಮ್ಮನ್ನು ನೇಪಾಳದೊಳಗೆ ಬಿಡುತ್ತಾರೆ. ಅಲ್ಲಿಂದ ಮೊದಲಿಗೆ ನೇಪಾಳದ ರಾಜಧಾನಿಯಾದ ಕಾಠ್ಮಂಡುವಿಗೆ ಹೋದೆವು.

## ನೇಪಾಳದ ಬಗ್ಗೆ

ನೇಪಾಳವು ಒಂದು ಸಣ್ಣ ಸ್ವತಂತ್ರ ದೇಶ. ಇದು ದಕ್ಷಿಣ ಏಷ್ಯಾದಲ್ಲಿದೆ. ಉತ್ತರಕ್ಕೆ ಟಿಬೆಟ್ ಮತ್ತು ಇನ್ನುಳಿದ ದಿಕ್ಕುಗಳು ಭಾರತಕ್ಕೆ ಹೊಂದಿಕೊಂಡಂತೆಯೇ ಇದೆ ಹಾಗೂ ಇದು ಹಿಮಾಲಯದ ಪರ್ವತಶ್ರೇಣಿಗಳ ಇಳಿಜಾರಿನಲ್ಲಿದೆ. ನೇಪಾಳದಲ್ಲಿ ಎಲ್ಲಿ ನೋಡಿದರೂ ಪರ್ವತ ಶಿಖರಗಳೇ ಕಾಣುತ್ತವೆ. ಪ್ರಪಂಚದ ಅತಿ ಎತ್ತರದ ಎಂಟು ಶಿಖರಗಳು ಇಲ್ಲಿಯೇ ಇವೆ. ಹಾಗೆಯೇ ಪರ್ವತಗಳ ಮಧ್ಯೆ ಆಳವಾದ ಗಿರಿಕಂದರಗಳಿವೆ. ಎಲ್ಲೆಲ್ಲೂ ಪ್ರಕೃತಿ ಸೌಂದರ್ಯವೇ ಮೈದಳೆದಂತಿದೆ. ಹೀಗಾಗಿ ಪ್ರವಾಸಿಗರನ್ನೂ, ಪರಿಶೋಧಕರನ್ನೂ, ಚಾರಣಿಗರನ್ನೂ ಆಕರ್ಷಿಸುತ್ತದೆ. ಇಲ್ಲಿ ೮೦% ಹಿಂದುಗಳಾದರೆ, ೧೧% ಬೌದ್ಧರು ಮತ್ತು ಮಿಕ್ಕವರು ಇತರೆ ಧರ್ಮಾನುಯಾಯಿಗಳು. ಇಲ್ಲಿ ಬೇರೆ ಬೇರೆ ಧರ್ಮಾನುಯಾಯಿ

ಗಳು ಇದ್ದರೂ ಧರ್ಮ ಸಂಘರ್ಷಗಳು ನಡೆದಿರುವುದಿಲ್ಲ. ಇಲ್ಲಿ ಸ್ತೂಪಗಳು, ಚೈತ್ಯಾಲಯಗಳು ಬಹಳ ಇರುವುದರಿಂದ ಬೌದ್ಧರ ಪ್ರಭಾವವೇ ಹೆಚ್ಚು ಎದ್ದು ಕಾಣುತ್ತದೆ. ಇದಕ್ಕೆ ಇಲ್ಲಿನ ಲುಂಬಿಣಿ ಎಂಬ ಸ್ಥಳದಲ್ಲಿ ಗೌತಮ ಬುದ್ಧ ಹುಟ್ಟಿದ್ದೇ ಕಾರಣವಿರಬಹುದು. ಸಿದ್ಧಾರ್ಥನು ರಾಜನ ಮಗನಾಗಿ ಹುಟ್ಟಿದ್ದರೂ ಎಲ್ಲ ಭೋಗಭಾಗ್ಯಗಳನ್ನೂ ತ್ಯಜಿಸಿ ಸತ್ಯಾನ್ವೇಷಣೆಗಾಗಿ ತಪಸ್ಸು ಮಾಡಿ ಬೌದ್ಧ ಧರ್ಮವನ್ನು ಸಾರಿದನು. ಬುದ್ಧನ ಶಿಷ್ಯರನ್ನು ಭಿಕ್ಷುಗಳೆಂದು ಕರೆಯುತ್ತಾರೆ. ಇವರ ಪ್ರಭಾವ ನೇಪಾಳಕ್ಕಿಂತ ದೇಶ ವಿದೇಶಗಳಲ್ಲಿ ಹೆಚ್ಚಾಗಿದೆ. ಇವರ ಭಾಷೆ ನೇಪಾಳಿ. ಸಾಹಸಕ್ಕೆ ಹೆಸರಾದ ಗೂರ್ಖಾಗಳು ಇಲ್ಲಿಯವರೇ. ಅವರು ಗೂರ್ಖಾಲಿ ಭಾಷೆ ಮಾತನಾಡುತ್ತಾರೆ. ಮುಖ್ಯ ನದಿಯಾದ ಭಾಗಮತಿಯು ನೇಪಾಳವನ್ನು ಸುತ್ತುವರಿದು ಕೊನೆಗೆ ಗಂಗೆಯನ್ನು ಸೇರುತ್ತದೆ. ಇಲ್ಲಿಯ ಮುಖ್ಯ ಬೆಳೆಗಳೆಂದರೆ ಭತ್ತ, ಗೋಧಿ, ಮೆಕ್ಕೆಜೋಳ ಮತ್ತು ಕಬ್ಬು. ಜನರ ಮುಖ್ಯ ಆಹಾರ ಅನ್ನ ಮತ್ತು ದಾಲ್. ಇಲ್ಲಿಯ ಹವಾಮಾನ ವಿಚಿತ್ರ. ಇದ್ದಕ್ಕಿದ್ದಂತೆ ಮಳೆ ಬರುತ್ತದೆ. ಚಳಿಯೂ ಜಾಸ್ತಿ. ಇಲ್ಲಿನ ಮುಂಜಾನೆಗಳಲ್ಲಿ ಪ್ರಕೃತಿಯು ನಯನ ಮನೋಹರವಾಗಿದ್ದು ಮನೋಲ್ಲಾಸವನ್ನುಂಟು ಮಾಡುತ್ತದೆ. ಭಾರತದ ಒಂದು ರುಪಾಯಿಗೆ ನೇಪಾಳದ ೧.೬ರೂಗೆ ಸಮ. ಇಲ್ಲಿನ ಆದಾಯದ ಮೂಲ ಪ್ರವಾಸೋದ್ಯಮವೆ ಆಗಿದೆ. ಈ ದೇಶವು ಪ್ರಪಂಚದ ಬಡ ದೇಶಗಳಲ್ಲಿ ಒಂದಾದರೂ ಜನರು ಸಂತೋಷವಾಗಿಯೇ ಇರುತ್ತಾರೆ.

ನೇಪಾಳದ ಮುಖ್ಯ ಊರುಗಳೆಂದರೆ ಕಾತ್ಮಂಡು, ಪೋಖ್ರಾ, ಭಕ್ತಾಪುರ, ಜನಕಪುರಿ, ಮತ್ತು ಪಾಟನ್.

## ಕಾತ್ಮಂಡು

ಕಾತ್ಮಂಡು ಇಲ್ಲಿಯ ರಾಜಧಾನಿ. ಇದು ಅತಿ ಹೆಚ್ಚು ಜನ ಸಂದಣಿ ಇರುವ ಪ್ರದೇಶ. ಇಲ್ಲಿನ ಪ್ರೇಕ್ಷಣೀಯ ಸ್ಥಳಗಳು ಎಂದರೆ ಮುಖ್ಯವಾಗಿ ಬೋಧನಾಥ ಸ್ತೂಪ, ಸ್ವಯಂಭೂ ಚೈತ್ಯಾಲಯ, ಜಗತ್ಪ್ರಸಿದ್ಧವಾದ ಬಾಬಾ ಪಶುಪತಿನಾಥನ ಮಂದಿರ, ಹನೂಮಾನ್ಢೋಕ, ಕುಮಾರಿ ದೇವಿ ಅರಮನೆ, ಬೂಢಾ ನೀಲಕಂಠ, ಮಲಗಿರುವ ಬುದ್ಧ. ಊರಿನ ಮಧ್ಯೆ ದರ್ಬಾರ್ಚೌಕವಿದ್ದು, ಈ ಚೌಕದ ಸುತ್ತಮುತ್ತಲೇ ಎಲ್ಲಾ ಪ್ರೇಕ್ಷಣಿಯ ಸ್ಥಳಗಳು ಒಟ್ಟಿಗೆ ಸಿಗುತ್ತವೆ.

**ಬೋಧನಾಥ ಸ್ತೂಪ:** ಇದು ಅತಿ ದೊಡ್ಡ ೩೬ ಮೀಟರ್ (೧೧೮ ಅಡಿ) ಎತ್ತರವಾಗಿದ್ದು ದೊಡ್ಡ ಗೋಳಾಕಾರದಲ್ಲಿದೆ. ಇಲ್ಲಿನ ಮೆಟ್ಟಿಲುಗಳನ್ನು ಹತ್ತಿ ಒಳಗೆ ಹೋದರೆ ಬುದ್ಧನಿಗೆ ಸಂಬಂಧಪಟ್ಟ ಚಿತ್ರಗಳು ಹಾಗೂ ವಿಗ್ರಹಗಳಿವೆ.

**ಬಾಬಾ ಪಶುಪತಿನಾಥ ಮಂದಿರ:** ಇದು ಹೆಸರಿಗೆ ತಕ್ಕಂತೆ ಶಿವನ ಮಂದಿರ. ಇದರ ಪಶ್ಚಿಮಕ್ಕೆ ಮುಖ್ಯ ದ್ವಾರವಿದೆ. ಇದು ಹಿಂದೂಧರ್ಮದ ಪವಿತ್ರ ಸ್ಥಳಗಳಲ್ಲೊಂದು. ಪ್ರಾಕೃತಿಕ ವಿಕೋಪಕ್ಕೆ ಸಿಲುಕಿ ಇಲ್ಲಿನ ಎಷ್ಟೋ ಮಂದಿರಗಳು ನಾಶವಾದರೂ ಈ ಮಂದಿರಕ್ಕೆ ಮಾತ್ರ ಏನೂ ತೊಂದರೆಯಾಗಿಲ್ಲ. ಪಶುಪತಿ ಎಂದರೆ ಪಶುಗಳ ಒಡೆಯ ಮಾತ್ರವಲ್ಲ. ಎಲ್ಲಾ ಜೀವಿಗಳಿಗೂ ಒಡೆಯ ಹಾಗೂ ಸಂರಕ್ಷಕ. ಇದು ದೇವಾಲಯಗಳ ಸಂಕೀರ್ಣವಾಗಿದ್ದು, ಬೇರೆ ಬೇರೆ ದೇವದೇವಿಯರ ಸಣ್ಣ ಸಣ್ಣ ಮಂದಿರಗಳೂ ಇವೆ. ಒಂದು ಕಡೆ ೧೦೧ ಶಿವಲಿಂಗಗಳ ಸಾಲೇ ಇದೆ. ಇವುಗಳನ್ನು ಜನ ಮುಟ್ಟಿ ಮುಟ್ಟಿ ನಮಸ್ಕರಿಸುತ್ತಿರುತ್ತಾರೆ.

ಕಾಶಿಯಂತೆ ಇಲ್ಲಿ ಸತ್ತರೆ ಮುಕ್ತಿ ಸಿಗುತ್ತದೆ ಎಂಬ ಪ್ರತೀತಿಯಿದೆ. ಈ ದೇವಾಲಯದ ಉತ್ತರ ಭಾಗದಲ್ಲಿ ೧೨೦೦ ಮೆಟ್ಟಿಲುಗಳಿದ್ದು ಇದನ್ನು ಹತ್ತಿ ಹೋದರೆ ಸ್ವಯಂಭೂ ಚೈತ್ಯಾಲಯವಿದೆ.

ಈ ದೇವಾಲಯಕ್ಕೆ ಹಿಂದುಗಳ ಹೊರತಾಗಿ ಅನ್ಯ ಧರ್ಮದವರಿಗೆ ಪ್ರವೇಶವಿಲ್ಲ. ಇಲ್ಲಿ ಫೋಟೋ ತೆಗೆಯುವುದು ನಿಷೇಧವಿರುವುದರಿಂದ ಪಶುಪತಿನಾಥನನ್ನು ಚಿತ್ರಗಳಲ್ಲಿ ನೋಡಲು ಸಾಧ್ಯವಿಲ್ಲ. ಭಗವಂತನ ದರ್ಶನ ಮಾಡಲು ಅಲ್ಲಿಗೇ ಹೋಗಬೇಕು. ಇಲ್ಲಿನ ಗರ್ಭಗುಡಿಗೆ ಹೋಗಲು ನಾಲ್ಕು ಕಡೆಯೂ ಬಾಗಿಲುಗಳಿವೆ. ಈ ಎಲ್ಲಾ ದ್ವಾರಗಳು ಬೆಳ್ಳಿಯದಾಗಿದ್ದು ಕೆತ್ತನೆಗಳಿಂದ ಕೂಡಿವೆ. ನಾವು ದೇವರ ದರ್ಶನಕ್ಕಾಗಿ ಕಾಯುತ್ತಿದ್ದಾಗ ಒದ್ದೆ ಬಟ್ಟೆಯಲ್ಲಿ ಬಂದ ಮುಖ್ಯ ಅರ್ಚಕರು ಪಶ್ಚಿಮದ ಬಾಗಿಲಿನತ್ತ ಹೋದರು. ಈ ಬಾಗಿಲಿನಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ಬೆಳ್ಳಿಯ ಕಟ್ಟೆಯಿದ್ದು ಇದನ್ನು ಹಾರಿಯೇ ಅರ್ಚಕರು ಗರ್ಭಗುಡಿಗೆ ಹೋಗಿದ್ದು ನಮಗೆ ವಿಶೇಷವೆನ್ನಿಸಿತ್ತು. ಇಲ್ಲಿ ಇದೇ ಪದ್ಧತಿಯಂತೆ. ಈ ದೇವಸ್ಥಾನವು ಪಗೋಡ ಆಕಾರದಲ್ಲಿದ್ದು ಮೇಲೆ ಚಿನ್ನದ ಕಲಶವಿದೆ. ಭಕ್ತರು ಮೊದಲು ಈ ಕಲಶದ ದರ್ಶನ ಮಾಡಿಯೇ ದೇವಾಲಯ ಪ್ರವೇಶಿಸಬೇಕು. ಈ ದೇವಾಲಯದ ಮಧ್ಯೆ ಮೂರುವರೆ ಅಡಿ ಎತ್ತರದ ಚಿನ್ನದ ಮೂರ್ತಿಯಿದೆ. ಈ ಮೂರ್ತಿಯು ನಾಲ್ಕು ದಿಕ್ಕಿನಲ್ಲಿಯೂ ಮುಖವುಳ್ಳದ್ದಾಗಿದ್ದು ಮೇಲೂ ಒಂದು ಮುಖವಿದೆ. ಈ ಮೇಲಿನ ಮುಖಕ್ಕೆ ಈಶಾನ ಎಂದು ಕರೆಯುತ್ತಾರೆ. ಮಿಕ್ಕ ನಾಲ್ಕನ್ನು ತತ್ಪುರುಷ, ಅಘೋರ, ವಾಮದೇವ ಮತ್ತು ಸದ್ಯೋಜಾತ ಎಂಬ ಹೆಸರಿನಿಂದ ಕರೆಯುತ್ತಾರೆ. ಇಲ್ಲಿ ಪೂಜೆ ಮಾಡುವವರು ದಕ್ಷಿಣಾಮ್ನಾಯ ಪದ್ಧತಿಯ ಶೃಂಗೇರಿಯಿಂದ ಬಂದವರು. ಶ್ರೀಮಚ್ಛಂಕರಾಚಾರ್ಯರ ಆದೇಶದಂತೆ ಪೂಜೆ ಅರ್ಚನೆ ನಡೆಯುತ್ತದೆ. ಇಲ್ಲಿನ ಪೌರೋಹಿತ್ಯ ವಂಶ ಪಾರಂಪರ್ಯವಲ್ಲ. ಶೃಂಗೇರಿಯಲ್ಲಿ ತರಬೇತು ಪಡೆದು ಅನೇಕ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಮಾತ್ರ ಇಲ್ಲಿನ ಅರ್ಚಕರಾಗಲು ಅವಕಾಶವಿರುತ್ತದೆ. ನಾವು ಅವರೊಂದಿಗೆ ಕನ್ನಡದಲ್ಲಿಯೇ ಮಾತನಾಡಿದೆವು. ಇಲ್ಲಿನ ಮುಖ್ಯದ್ವಾರದ ಎದುರಿಗೆ ಬೆಳ್ಳಿಯ ೨೦ ಅಡಿ ಎತ್ತರದ ನಂದಿಯ ವಿಗ್ರಹವಿದೆ. ದೇವರ ದರ್ಶನಕ್ಕಿಂತ ಮೊದಲು ನಂದಿಯನ್ನು ನೋಡಿದರೆ ಪಶುಜನ್ಮ ಬರುತ್ತದೆಂಬ ಪ್ರತೀತಿಯಿದೆ. ಆದ್ದರಿಂದ ಇಲ್ಲಿಗೆ ಬರುವ ಭಕ್ತರು ನಂದಿ ಕಣ್ಣಿಗೆ ಬೀಳದಂತೆ ಮುಖ ಮುಚ್ಚಿಕೊಂಡು ದೇವಾಲಯ ಪ್ರವೇಶಿಸುತ್ತಾರೆ. ಪೂರ್ವ ದಿಕ್ಕಿನಲ್ಲಿ ಭಾಗಮತಿ ನದಿ ಹರಿಯುತ್ತದೆ. ಈ ನದಿಯ ಗೌರಿ ಘಾಟಿನಲ್ಲಿ ಸ್ನಾನ ಮಾಡಿ ಇಲ್ಲಿಂದಲೇ ಜಲವನ್ನು ತಂದು ದೇವರಿಗೆ ಅಭಿಷೇಕ ಮಾಡುತ್ತಾರೆ. ಇಲ್ಲಿನ ಮಧ್ಯಾಹ್ನದ ಪೂಜೆ ಬಹಳ ವಿಶೇಷ. ಪಂಚಾಮೃತ ಅಭಿಷೇಕ

ಮಾಡಿ ನಂತರ ನೈವೇದ್ಯ, ಧೂಪ ದೀಪಗಳೊಂದಿಗೆ ಪೂಜೆ ಮಾಡಿ ಆಮೇಲೆ ಬಹಳ ಚೆನ್ನಾಗಿ ಅಲಂಕಾರ ಮಾಡುತ್ತಾರೆ. ಇಲ್ಲಿ ತಟ್ಟೆಗೆ ೧೦೦ ರೂ ಕಾಣಿಕೆ ಹಾಕಿದರೆ ಮಾತ್ರ ಒಂದು ರುದ್ರಾಕ್ಷಿ ಮಾಲೆ ಕೊಡುತ್ತಾರೆ.

ಸಂಜೆ ಆರು ಗಂಟೆಯ ನಂತರ ಭಾಗಮತಿ ನದಿಗೆ ಧೂಪಾರತಿ, ರಥದಾರತಿಗಳನ್ನು ಮಾಡುತ್ತಾರೆ. ಇದು ನೋಡಲು ತುಂಬಾ ಚೆನ್ನಾಗಿರುತ್ತದೆ.

ದೇವಸ್ಥಾನದ ಪಶ್ಚಿಮ ದಿಕ್ಕಿನಲ್ಲಿ ಎರಡು ಮಹಡಿಯ ವತ್ಸಲಾ ದೇವಿಯ ಮಂದಿರವಿದೆ. ಇಲ್ಲಿ ತೆಳ್ಳನೆಯ ಕಲ್ಲಿನ ಪೀಠ ಮಾತ್ರ ವಿದೆ. ಇಲ್ಲಿ ವಿಗ್ರಹವೇನೂ ಇಲ್ಲ. ಆದರೆ ಬಲಿ ನಡೆಯುತ್ತದಂತೆ. ಇಲ್ಲಿ ಪಾರ್ವತಿಯೇ ಅದೃಶ್ಯರೂಪದಲ್ಲಿ ವಾಸ ಮಾಡುತ್ತಿದ್ದಾಳೆಂಬ ಪ್ರತೀತಿಯಿದೆ. ಇದನ್ನು ಗುಹ್ಯೇಶ್ವರಿ ಶಕ್ತಿಪೀಠ ಎಂದು ಕರೆಯುತ್ತಾರೆ.

ನಮ್ಮಲ್ಲಿ ಭೀಮನ ಅಮಾವಾಸ್ಯೆಯ ವ್ರತ ಇರುವಂತೆ, ಇಲ್ಲಿ ತೀಜ್ ವ್ರತವಿದೆ. ಇಲ್ಲಿನ ಮಹಿಳೆಯರು ದಿನವಿಡೀ ಉಪವಾಸ ವಿದ್ದು ಗಂಡನ ಆರೋಗ್ಯ, ಆಯುಷ್ಯಕ್ಕಾಗಿ ಪ್ರಾರ್ಥಿಸುತ್ತಾರೆ. ಮಾಘಮಾಸದಲ್ಲಿ ದೇವಿಯ ಮೂರು ದಿನದ ರಥಯಾತ್ರೆ ನಡೆಯುತ್ತದೆ.

ಇದರ ಹತ್ತಿರದಲ್ಲಿಯೇ ಗೋರಖನಾಥನ ದೇವಸ್ಥಾನವಿದೆ.

**ಹನೂಮಾನ್ಧೋಕ:** ಇದು ಕೂಡ ದರ್ಬಾರ್ಚೌಕದಲ್ಲಿಯೇ ಇದೆ. ಮೂರ್ತಿ ನಮ್ಮಲ್ಲಿನ ಹನುಮಾನ್ ತರಹ ಇಲ್ಲ. ನೋಡಲು ಸ್ವಲ್ಪ ಭಯಂಕರ ಅನ್ನಿಸುತ್ತದೆ. ಇದರಲ್ಲಿ ಕಂಚಿನ ಹಾಗೂ ಮರದ ಮೂರ್ತಿಗಳಿವೆ. ಇದು ದೇವಸ್ಥಾನ. ಆದರೆ ದೇವಸ್ಥಾನದಂತಿಲ್ಲ , ಮ್ಯೂಸಿಯಂ ತರಹ ಇದೆ.

**ಕುಮಾರಿ ದೇವಿಯ ಅರಮನೆ:** ೫ರಿಂದ ೯ ವರ್ಷದ ಒಳಗಿನ ವಿಶೇಷ ಲಕ್ಷಣವುಳ್ಳ ಹುಡುಗಿಯನ್ನು ಶಕ್ತಿಯ ರೂಪವೆಂದು ಆರಾಧಿಸುತ್ತಾರೆ. ಅಂತಹ ಹುಡುಗಿಯನ್ನು ಪೂಜಾರಿಯೇ ಆರಿಸುತ್ತಾರೆ. ಅವಳಿಗೆ ವಿಶೇಷ ಅಲಂಕಾರ ಮಾಡಿ ದೇವಿಯಂತೆ ಕೂರಿಸಿರುತ್ತಾರೆ. ದಿನವೂ ಕೆಂಪು ಬಣ್ಣದ ವಸ್ತ್ರವನ್ನೇ ಆಕೆಗೆ ಉಡಿಸಬೇಕು. ಇದು ಶುದ್ಧತೆಯ ಪ್ರತೀಕವಂತೆ. ಪೂಜೆ ಆಗುವವರೆಗೂ ಆಕೆ ಅಲ್ಲಾಡುವಂತಿಲ್ಲ, ಮಾತನಾಡುವಂತಿಲ್ಲ. ಆಕೆಯು ಕಾಲನ್ನು ನೆಲಕ್ಕೆ ತಾಕಿಸುವಂತಿಲ್ಲ. ಆಕೆಯನ್ನು ಎತ್ತಿಕೊಂಡೇ ಓಡಾಡುತ್ತಾರೆ. ಆಕೆಗೆ ಯಾರೊಡನೆಯೂ ಸಂಪರ್ಕವಿರುವುದಿಲ್ಲ. ವರ್ಷಕೊಮ್ಮೆ ಅಲ್ಲಿ ಇಂದ್ರಜಾತ ಎಂಬ ರಥೋತ್ಸವವು ನಡೆಯುತ್ತದೆ. ಆಗ ಮುಖವಾಡಗಳನ್ನು ಹಾಕಿ ಸಾಮೂಹಿಕ ನೃತ್ಯ ಮಾಡುತ್ತಾರೆ. ಬಂಗಾರದ ಪಲ್ಲಕ್ಕಿಯಲ್ಲಿ ಕುಮಾರಿ ದೇವಿಯನ್ನು ಕೂರಿಸಿ ಊರೆಲ್ಲ ಮೆರವಣಿಗೆ ಮಾಡಿಸುತ್ತಾರೆ. ದಾರಿಯಲ್ಲಿ ಜನರು ಆಕೆಗೆ ನಮಿಸಿ ಆಶೀರ್ವಾದ ತೆಗೆದುಕೊಳ್ಳುತ್ತಾರೆ. ಋತುಮತಿಯಾಗುವವರೆಗೆ ಮಾತ್ರ ಆಕೆ ದೇವಿ. ನಂತರ ಬೇರೆ ಹುಡುಗಿಯನ್ನು ಕರೆತಂದು ದೇವಿ ಮಾಡುತ್ತಾರೆ. ಆಮೇಲೆ ಈ ಹುಡುಗಿಯು ಸಾಮಾನ್ಯರಂತೆ ಜೀವನವನ್ನು ನಡೆಸಲಾಗುವುದಿಲ್ಲ. ವಿದ್ಯಾಭ್ಯಾಸ, ಮದುವೆ ಎಲ್ಲದರಿಂದ ದೂರ ಇಡುತ್ತಾರೆ. ಇದೆಂತಹ ವಿಪರ್ಯಾಸ! ಅಂತಹ ಹುಡುಗಿಯರ ಜೀವನವನ್ನು ನೆನೆದರೆ ಬೇಜಾರಾಗುತ್ತದೆ.

**ಬುಢಾ ನೀಲಕಂಠ:** ದರ್ಬಾರ್ಚೌಕದಿಂದ ಎಂಟು ಕಿ.ಮೀ. ದೂರದಲ್ಲಿ ಬುಢಾ ನೀಲಕಂಠ ಎಂಬ ಸ್ಥಳವಿದೆ. ಇದನ್ನು ಚಂಪೂ ನಾರಾಯಣ ಮಂದಿರ ಎಂದೂ ಕರೆಯುತ್ತಾರೆ. ಅಲ್ಲಿ ಸಂಪಿಗೆ ಮರಗಳ ವನವಿದೆ. ರುದ್ರಾಕ್ಷಿ ಮರಗಳೂ ಇವೆ. ಇಲ್ಲಿ ಎಂಟು ಅಡಿಯ ಆದಿಶೇಷನ ಮೇಲೆ ಮಲಗಿರುವ ವಿಷ್ಣುವಿನ ವಿಗ್ರಹ ವಿದೆ. ಸಣ್ಣ ಕೊಳದಂತೆ ಮಾಡಿ ನೀರಿನಲ್ಲಿ ಈ ವಿಗ್ರಹವನ್ನು ಇಟ್ಟಿರುತ್ತಾರೆ. ಅಲ್ಲಿಯೇ ಪೂಜೆ ಮಾಡುತ್ತಾರೆ. ಇದು ಬಯಲು ಆಲಯವಾಗಿದ್ದು ಮೇಲೆ ನೆರಳಿಗಾಗಿ ಸುತ್ತಲೂ ನಾಲ್ಕು ಕಂಬಗಳ ಮೇಲೆ ಒಂದು ಚಾದರವನ್ನು ಕಟ್ಟಿರುತ್ತಾರೆ. ಇದರ ಹಿಂದೆ ಒಂದು ದಂತ ಕತೆ ಇದೆ. ಇದು ಬುಢಾ ನೀಲಕಂಠ ಎಂಬ ರೈತನಿಗೆ ಸಿಕ್ಕ ವಿಗ್ರಹವಂತೆ. ಆದ್ದರಿಂದ ಆ ಸ್ಥಳಕ್ಕೂ ದೇವರಿಗೂ ಅವನ ಹೆಸರನ್ನೇ ಇಟ್ಟಿದ್ದಾರಂತೆ.

**ಮಲಗಿರುವ ಬುದ್ಧ:** ಇದು ದರ್ಬಾರ್ಚೌಕದಿಂದ ಮೂರು ಕಿ.ಮೀ. ದೂರದಲ್ಲಿದೆ. ೧೨೦ ಮೆಟ್ಟಿಲುಗಳಿರುವ ಒಂದು ಸಣ್ಣ ಗುಡ್ಡದ ಮೇಲಿನ ಗುಹೆಯಲ್ಲಿ ಪಕ್ಕಕ್ಕೆ ತಿರುಗಿ ತಲೆಯ ಕೆಳಗೆ ಕೈಯಿಟ್ಟು ಮಲಗಿರುವ ಬುದ್ಧನ ವಿಗ್ರಹವಿದೆ. ಇಲ್ಲಿನ ಗುಡ್ಡದ ಮೇಲಿಂದ ನೋಡಿದರೆ ನಿಸರ್ಗವು ಬಹಳ ರಮಣೀಯವಾಗಿ ಕಾಣುತ್ತದೆ. ಇದು ಬುದ್ಧ ವಿಶ್ರಾಂತಿಗಾಗಿ ಮಲಗಿರುವಂತೆ ಕಾಣುತ್ತದೆ.

## ಪೋಖ್ರಾ

ಇದು ಕಠ್ಮಂಡುವಿನಿಂದ ೨೦೦ ಕಿ.ಮೀ. ದೂರದಲ್ಲಿರುವ ನೇಪಾಳದ ಎರಡನೆಯ ದೊಡ್ಡ ಪಟ್ಟಣವಿದು ಘೂರ್ಖಾ ಜಿಲ್ಲೆಯಲ್ಲಿದೆ. ಇದು ಸರೋವರಗಳ ಊರು. ಇಲ್ಲಿಯ ಫೇವಾ ಕೆರೆಯು ದೊಡ್ಡದಾಗಿದ್ದು ಎಂಟು ಕಿ.ಮೀ. ಸುತ್ತಳತೆಯಲ್ಲಿದೆ. ಇದು ಉಪ್ಪು ನೀರಿನ ಸರೋವರವಂತೆ. ಇದರ ನಡುಗಡ್ಡೆಯಲ್ಲಿ ತಾಲ್ಬರಾಹಿ ಎಂಬ ದೇವಿಯ ಮಂದಿರವಿದೆ. ರೂಪತಾಲ್ಎಂಬ ಸಿಹಿ ನೀರಿನ ಸರೋವರದಲ್ಲಿ ದೋಣಿ ವಿಹಾರಕ್ಕೆ ಅವಕಾಶ ವುಂಟು. ಇದರ ಸುತ್ತಳತೆ ಎರಡು ಕಿ. ಮೀ ಇದೆ. ನಾವು ಇಲ್ಲಿ ದೋಣಿ ವಿಹಾರ ಮುಗಿಸಿ ಹೊರಡುವಾಗ ಜೋರು ಮಳೆ ಬಂತು. ಜೊತೆಗೆ ಸಣ್ಣ ಸಣ್ಣ ಬಟಾಣಿಯಷ್ಟು ಗಾತ್ರದ ಆಲಿಕಲ್ಲು ಬಿದ್ದು ದಾರಿಯಲ್ಲೆಲ್ಲಾ ಮುತ್ತುಗಳನ್ನೇ ಹಾಸಿದಂತಿತ್ತು. ನಾವು ನಮ್ಮ ವಯಸ್ಸನ್ನು ಮರೆತು ಮಕ್ಕಳಂತೆ ಸಂಭ್ರಮಿಸಿದೆವು.

ಇಲ್ಲಿ ವಿಂಧ್ಯಾವಾಸಿನಿ ದೇವಿಯ ಮಂದಿರವಿದೆ. ಈ ಮಂದಿರದ ಸುತ್ತಲೂ ಪೂಜಾ ಸಾಮಾಗ್ರಿಗಳ ಸಣ್ಣ ಅಂಗಡಿಗಳ ಸಾಲುಗಳಿವೆ. ಇಲ್ಲಿ ರುದ್ರಾಕ್ಷಿ ಮಾಲೆಗಳು, ಮಣಿಹಾರಗಳು ಸಿಗುತ್ತವೆ.

ಹಿಮಾಲಯಕ್ಕೆ ಹೋಗುವ ಪರ್ವತಾರೋಹಿಗಳು ಇಲ್ಲಿಂದಲೇ ಹೊರಡುತ್ತಾರೆ. ಇಲ್ಲಿಂದಲೇ ಅನ್ನಪೂರ್ಣ ಪರ್ವತ ಶ್ರೇಣಿಗಳು ಬಹು ಸುಂದರವಾಗಿ ಕಾಣುತ್ತವೆ. ಬೆಳಗಿನ ಬಿಸಿಲಿಗೆ ಪರ್ವತ

ಶ್ರೇಣಿಗಳು ಎಷ್ಟು ಸುಂದರವಾಗಿ ಕಾಣುತ್ತಿದ್ದವು ಎಂದರೆ ನೋಡುತ್ತಾ ಮೈಮರೆತುಬಿಟ್ಟಿದ್ದೆವು. ಇಲ್ಲಿ ಹಸಿರು ಹುಲ್ಲುಗಾವಲು ಇರುವುದರಿಂದ ಎಲ್ಲೆಲ್ಲೂ ಕುರಿಮಂದೆಗಳು ಹಾಗೂ ಕುರಿಗಾಹಿಗಳು ಕಂಡು ಬರುತ್ತಾರೆ.

ಇಲ್ಲಿ ಸತ್ತವರನ್ನು ಭಾಗಮತಿ ನದಿಯ ದಂಡೆಯಲ್ಲಿ ಸುಟ್ಟು ನದಿಗೆ ತಳ್ಳಿಬಿಡುತ್ತಾರೆ. ಆ ಭಾಗಮತಿ ನದಿಯು ಗಂಗೆಗೆ ಸೇರುವುದರಿಂದ ಸತ್ತವರು ಗಂಗೆಗೆ ಸೇರಿ ಮುಕ್ತಿ ಪಡೆಯುತ್ತಾರೆಂಬ ನಂಬಿಕೆಯಿದೆ.

ಇಲ್ಲಿಂದ ಮುಂದೆ ಮನೋಕಾಮನಾ ದೇವಿಯ ಮಂದಿರಕ್ಕೆ ಹೊರಟೆವು. ಆ ದೇವಿಯ ಮಂದಿರವು ಸಮುದ್ರ ಮಟ್ಟದಿಂದ ೨೫೫೪ ಅಡಿ ಎತ್ತರದಲ್ಲಿದೆ. ಪರ್ವತದ ತುದಿಯಲ್ಲಿರುವ ಆ ಮಂದಿರಕ್ಕೆ ಹೋಗಬೇಕಾದರೆ ಕೇಬಲ್ ಕಾರಿನಲ್ಲಿಯೇ ಹೋಗಬೇಕು. ಇದರಲ್ಲಿ ಐದು ಜನ ಒಟ್ಟಿಗೆ ಕುಳಿತು ಹೋಗಬಹುದು. ಮೇಲಿನಿಂದ ಕೆಳಗೆ ನೋಡಿದರೆ ಹಚ್ಚ ಹಸುರಿನ ಕಣಿವೆಗಳು ಮಧ್ಯೆ


ಮನೋಕಾಮನಾ ಮಂದಿರ

ಬಿಳಿಯ ಗೆರೆ ಎಳೆದಂತೆ ಕಾಣುವ ತ್ರಿಶೂಲಿ ನದಿ ಕಾಣುತ್ತದೆ. ಇದೊಂದು ಬಹಳ ಆಹ್ಲಾದಕರ ಅನುಭವ. ಕೇಬಲ್ ಕಾರಿನಿಂದ ಇಳಿದ ನಂತರ ಸುಮಾರು ಒಂದು ಕಿ.ಮೀ.ನಷ್ಟು ನಡೆಯಬೇಕು. ದಾರಿಯಲ್ಲಿ ಮಧ್ಯೆ ಮಧ್ಯೆ ಮೆಟ್ಟಿಲುಗಳನ್ನು ಹತ್ತಿ ಹೋಗಬೇಕು. ಹೋಗುವಾಗ ದಾರಿಯಲ್ಲಿ ಅಲ್ಲಲ್ಲಿ ನೇಪಾಳೀ ವಿಶೇಷ ತಿಂಡಿಗಳ ಅಂಗಡಿಗಳು, ಅಲಂಕಾರಿಕ ವಸ್ತುಗಳ ಅಂಗಡಿಗಳು, ಪೂಜಾ ಸಾಮಾಗ್ರಿಗಳ ಅಂಗಡಿಗಳಿವೆ. ಅಲ್ಲಿ ದೇವಿಯ ಉದ್ಭವ ಶಿಲೆಯಿದೆ. ಅದನ್ನು 'ಭಗವತಿ' ಎಂದು ಕರೆಯುತ್ತಾರೆ. ಅವಳು ಪಾರ್ವತಿಯ ಇನ್ನೊಂದು ರೂಪ. ಅಲ್ಲಿಗೆ ಬಂದ ಭಕ್ತರ ಮನೋಕಾಮನೆಯನ್ನು ದೇವಿ ಈಡೇರಿಸುವುದರಿಂದ ಆಕೆಗೆ ಮನೋಕಾಮನಾ ದೇವಿ ಎಂದೂ ಕರೆಯುತ್ತಾರೆ. ಈ ದೇವಾಲಯವು ಬೆಳಗ್ಗೆ ಆರು ಗಂಟೆಯಿಂದ ಸಂಜೆ ಏಳು ಗಂಟೆಯವರೆಗೆ ತೆರೆದಿರುತ್ತದೆ. ಸಂಜೆಯ ಆರತಿ ಒಂದು ಗಂಟೆಯ ಕಾಲ ಕೊಂಬು ಕಹಳೆ ಮುಂತಾದ ವಾದ್ಯಗಳೊಂದಿಗೆ ನಡೆಯುತ್ತದೆ. ಅಲ್ಲಿ ಸೋಮವಾರದ ಹೊರತಾಗಿ ಮಿಕ್ಕೆಲ್ಲಾ ದಿನಗಳು ದೇವಿಗೆ ಪ್ರಾಣಿಬಲಿಯು ಅವ್ಯಾಹತವಾಗಿ ನಡೆಯುತ್ತಿರುತ್ತದೆ. ಅಲ್ಲಿ ಒಳಗೆ ಹೋಗಲು ನೂಕುನುಗ್ಗಲಿರುತ್ತದೆ. ಇಲ್ಲಿ ನಾವು ತೆಂಗಿನ ಕಾಯಿ ಒಡೆಯುವಂತೆ ಅಲ್ಲಿ ದೇವಿಗೆ ಕುರಿ ಕೋಳಿಗಳನ್ನು ಶಿಲೆಯ ಎದುರಿಗೇ ಬಲಿ ಕೊಟ್ಟು ಶಿಲೆಗೆ ಆ ಪ್ರಾಣಿಯ ರಕ್ತದಿಂದ ಅಭಿಷೇಕವನ್ನು ಮಾಡುತ್ತಿರುತ್ತಾರೆ. ಅದೆಲ್ಲಾ ಹರಕೆ ತೀರಿಸುವ ಬಗೆಯಂತೆ! ನಮಗೆ ಈ ದೃಶ್ಯಗಳು ಭಯಾನಕವೆನ್ನಿಸಿ ಆದಷ್ಟೂ ಬೇಗ ಹೊರಕ್ಕೆ ಬಂದೆವು. ನಮ್ಮ ಪಾದಗಳಿಗೂ ರಕ್ತ ಮೆತ್ತಿಕೊಂಡಿತ್ತು. ಹೊರಗೆ ಬಂದು ನಮ್ಮ ಪಾದಗಳನ್ನು ತೊಳೆಯುವವರೆಗೂ ಮನಸ್ಸಿಗೆ ಹಿಂಸೆ ಅನ್ನಿಸುತಿತ್ತು. ಅಲ್ಲಿಂದ ಕೆಳಗೆ ಬಂದ ನಂತರ ಮತ್ತೊಂದು ಜಾಗದಲ್ಲಿ ಕೆಳಗೆ ಗಿರಿಕಂದಕಗಳ ಮಧ್ಯದಲ್ಲಿ ಕಾಲೀ ಗಂಡಕೀ ನದಿ ಹರಿಯುತ್ತಿರುತ್ತದೆ. ಈ ನದಿಯು ತುಂಬಾ ಆಳದಲ್ಲಿದ್ದರೂ ಅದರ ಹರಿಯುವಿಕೆಯ ಘರ್ಜನೆ ಮೇಲಕ್ಕೂ ಕೇಳಿಸುತ್ತಿತ್ತು. ಈ ನದಿಯ ನೀರು ಕಪ್ಪಾಗಿ ಕಾಣುವುದರಿಂದ ಕಾಲೀ ಗಂಡಕೀ ಅನ್ನುವ ಹೆಸರು ಬಂದಿರಬಹುದು.

## ಭಕ್ತಾಪುರ

ಇದು ಕಾಠ್ಮಂಡುವಿನಿಂದ ೧೩ ಕಿ.ಮೀ. ದೂರದಲ್ಲಿದೆ. ಇದು ಸಣ್ಣ ಊರು. ಇಲ್ಲಿ ಬಹಳಷ್ಟು ದೇವಾಲಯಗಳು, ಪುರಾತನ ಕಟ್ಟಡಗಳು, ಕಲೆ, ಕೈಗಾರಿಕೆ ಮತ್ತು ಮಣ್ಣಿನ ವಿಗ್ರಹಗಳಿಗೆ ಹೆಸರುವಾಸಿಯಾಗಿದೆ. ಇಲ್ಲಿ ನ್ಯಾಟಾ ಪೋಲಾ ಎಂಬ ಸಿದ್ಧ ಲಕ್ಷ್ಮಿಯ ಮಂದಿರವಿದೆ. ಐದುವರೆ ಅಡಿಯ ದೇವಿಯ ಸುಂದರ ವಾದ ವಿಗ್ರಹವಿದೆ. ಇದೂ ಸಹ ಪಾರ್ವತಿಯ ಅವತಾರ ಎಂದು ಹೇಳುತ್ತಾರೆ. ಇದು ಬಹಳ ಎತ್ತರವಾದ ಪಗೋಡ ಶೈಲಿಯ ದೇವಾಲಯ. ಆದರೆ ಪೂಜೆ ಮಾಡುವವರ ಹೊರತಾಗಿ ಬೇರೆ ಯಾರಿಗೂ ಪ್ರವೇಶವಿಲ್ಲ. ದೇವಿಯನ್ನು ನಾವು ಹೊರಗಿನ ಕಿಂಡಿಯಿಂದಲೇ ನೋಡಬೇಕು. ಒಳಗೆ ಕತ್ತಲೆ ಇದ್ದುದರಿಂದ ನಮಗೆ ಏನೂ ಸರಿಯಾಗಿ ಕಾಣಿಸಲಿಲ್ಲ. ಹೊರಗೆ ಇರುವ ದೇವಿಯ ಫೋಟೋ ನೋಡಿಯೇ ತೃಪ್ತಿ ಪಡಬೇಕು.

ಅಲ್ಲೇ ಹತ್ತಿರದಲ್ಲಿ ಒಂದು ಸಣ್ಣ ದೇವಿಯ ಗುಡಿಯಿದೆ. ಅದರ ಬಾಗಿಲು ಅಪ್ಪಟ ಬಂಗಾರದ್ದಂತೆ. ಆದರೆ ನಮಗೆ ಹಾಗೆ ಕಾಣಿಸುವುದಿಲ್ಲ. ಅದು ಚಿನ್ನದ್ದಾದ್ದರಿಂದ ಪೋಲೀಸಿನ ಸರ್ಪ ಕಾವಲಿದೆ. ಆ ಬಾಗಿಲಿನಿಂದ ಯಾರಿಗೂ ಪ್ರವೇಶವಿಲ್ಲ. ಗುಡಿಯ ಎಡಭಾಗದಲ್ಲಿ ಒಂದು ಸಣ್ಣ ಕಿಂಡಿಯಿದೆ. ಈ ಕಿಂಡಿಯ ಮುಂದೆ ಒಂದು ಬಲಿ ಪೀಠವಿದೆ. ಇಲ್ಲಿಗೇ ಬಂದು ಬಲಿ ಕೊಟ್ಟು ಹೋಗುತ್ತಾರೆ. ನಾವು ಅಲ್ಲಿಗೆ ಹೋದಾಗ ಒಬ್ಬ ಬಂದು ಒಂದು ಕೋಳಿ ಬಲಿ ಕೊಟ್ಟು ಹೋದುದನ್ನು ನೋಡಿದೆವು. ನಮಗೆ ಅದು ಏನೆಂದು ಅರ್ಥ ಆಗುವುದರೊಳಗೆ ಬಲಿಕೊಟ್ಟು ರಕ್ತ ಸುರಿಸಿಕೊಂಡು ಹೋದ. ಅದನ್ನು ನೋಡಿದ ನಮಗೆ ಕಣ್ಣು ಕತ್ತಲಿಟ್ಟಂತಾಗಿತ್ತು! ಗುಡಿಯ ಎದುರಿಗೆ ಬಹು ದೊಡ್ಡ ಅಂಗಳವಿದೆ. ಇಲ್ಲಿ ಬಹಳ ಹಿಂದೆ ವರ್ಷಕ್ಕೊಮ್ಮೆ ೧೦೮ ಕೋಣಗಳ ಬಲಿ ಕೊಡುತ್ತಿದ್ದರಂತೆ. ಈಗ ಆ ರೀತಿಯ ಪದ್ಧತಿಯಿಲ್ಲ.

**ಜನಕಪುರ**

ಜನಕ ಮಹಾರಾಜನಿಗೆ ಯಜ್ಞಕ್ಕಾಗಿ ಭೂಮಿ ಉಳುವಾಗ ಒಂದು ಬಂಗಾರದ ಪೆಟ್ಟಿಗೆಯಲ್ಲಿ ಸೀತೆಯು ಸಿಕ್ಕ ಜಾಗವಿದು. ಸೀತೆಗಾಗಿಯೇ ನಿರ್ಮಿಸಿದ ಅರಮನೆಯಿದೆ. ಅದನ್ನೀಗ ಮಂದಿರ ವನ್ನಾಗಿ ಮಾಡಿದ್ದಾರೆ. ಪಕ್ಕದಲ್ಲೇ ಇರುವ ಸೀತಾರಾಮರ ವಿವಾಹ ವಾದ ಮಂಟಪವೂ ಒಂದು ಅರಮನೆಯಷ್ಟೇ ದೊಡ್ಡದಾಗಿದೆ. ಒಂದು ದಂತ ಕತೆಯ ಪ್ರಕಾರ ರಾಮ ಮುರಿದ ಶಿವಧನುಸ್ಸು ಇದೇ ಅರಮನೆಯಲ್ಲಿ ಇತ್ತಂತೆ. ಆ ಧನುಸ್ಸನ್ನು ಮುರಿದಾಗ, ಮೂರು ತುಂಡುಗಳಾಗಿದ್ದು ಒಂದು ತುಂಡು ಪಾತಾಳಕ್ಕೂ, ಒಂದು ತುಂಡು ಆಕಾಶಕ್ಕೂ, ಮಧ್ಯದ ತುಂಡು ಅಲ್ಲಿಯೇ ಆಲದ ಮರದ ಬಳಿಯೇ ಬಿದ್ದಿತಂತೆ. ಅದು ವರ್ಷಕ್ಕೊಮ್ಮೆ ಒಂದು ಎಳ್ಳಿನಷ್ಟು ಬೆಳೆಯುತ್ತಿದೆಯಂತೆ.

**ಪಾಟನ್**

ಇದು ಕಠ್ಮಂಡು ಕಣಿವೆಯಲ್ಲಿನ ಲಲಿತಪುರ ಎಂಬಲ್ಲಿದೆ. ಹಳೇ ಕಟ್ಮಂಡು ಮತ್ತು ಭಾಗಮತಿ ನದಿಯ ಮಧ್ಯ ಭಾಗದಲ್ಲಿದೆ. ಇಲ್ಲಿ ಅಷ್ಟಮೂಲೆಯ ಶ್ರೀಕೃಷ್ಣನ ದೇವಾಲಯವಿದೆ. ಕೃಷ್ಣ ಜನ್ಮಾಷ್ಟಮಿಗೆ ಸಾವಿರಾರು ಜನ ಸೇರುತ್ತಾರೆ. ಇಲ್ಲಿಯ ದರ್ಬಾರಿ ಚೌಕದಲ್ಲಿ ಭೀಮಸೇನನ ಮಂದಿರವಿದೆ. ಅಲ್ಲಿಯೇ ಒಂದು ಎತ್ತರದ ಸ್ಥಳದಲ್ಲಿ ದೊಡ್ಡ ಗಂಟೆಯನ್ನು ಕಟ್ಟಿದ್ದಾರೆ. ಇಲ್ಲಿನ ಎಲ್ಲಾ ದೇವಸ್ಥಾನಗಳು ಪಗೋಡ ಶೈಲಿಯಲ್ಲಿಯೇ ಇವೆ. ಇಲ್ಲಿಯ ದೇವಸ್ಥಾನಗಳು ಮರದ ಕೆತ್ತನೆಯ ಕಲಾಕೃತಿಗಳಿಗೆ, ಕಂಚಿನ ಪ್ರತಿಮೆಗಳಿಗೆ ಹೆಸರುವಾಸಿ ಯಾಗಿದ್ದು ಯುನೆಸ್ಕೊ ವರ್ಲ್ಡ್ ಹೆರಿಟೇಜ್ ಸೈಟಿಗೆ ಸೇರಿವೆ. ೨೦೧೫ರಲ್ಲಿ ಭೂಕಂಪವಾದ್ದರಿಂದ ಬಹಳಷ್ಟು ಕಟ್ಟಡ, ದೇವಸ್ಥಾನ ಗಳಿಗೆ ಹಾನಿಯಾಗಿದ್ದು ಈಗ ಮತ್ತೆ ಅವುಗಳನ್ನು ಪುನರ್ನಿರ್ಮಾಣ ವನ್ನು ಮಾಡುತ್ತಿದ್ದಾರೆ. ಇಲ್ಲಿನ ಮ್ಯೂಸಿಯಂನಲ್ಲಿ ಒಂದಕ್ಕಿಂತ ಒಂದು ಸುಂದರವಾದ ಕಂಚಿನ ವಿಗ್ರಹಗಳಿವೆ.

ಇಲ್ಲಿಂದ ಮುಂದೆ ನಾವು ಮುಕ್ತಿನಾಥನನ್ನು ನೋಡಲು ಹೋಗ ಬೇಕಾಗಿತ್ತು. ಹೆಚ್ಚಿನ ಮಂಜು ಸುರಿಯುತ್ತಿದ್ದುದರಿಂದ ಹವಾ ಮಾನ ವೈಪರೀತ್ಯದ ಕಾರಣದಿಂದಾಗಿ ನಮ್ಮ ಪ್ರಯಾಣವನ್ನು ರದ್ದುಗೊಳಿಸುವುದು ಅನಿವಾರ್ಯವಾಯಿತು. ನಮಗೆ ಇದರಿಂದ ನಿರಾಶೆಯಾದರೂ ಅನ್ಯ ಮಾರ್ಗವಿರಲಿಲ್ಲ.

ಒಟ್ಟಿನಲ್ಲಿ ನಮ್ಮ ನೇಪಾಳ ಪ್ರವಾಸವು ಚೆನ್ನಾಗಿತ್ತು. ಅದು ಸುಂದರವಾದ ದೇಶವಾಗಿದ್ದು, ಅಲ್ಲಿನ ಸುಂದರರಾದ ಹಾಗೂ ಸ್ನೇಹಪರರಾದ ಜನ ಸಾಮಾನ್ಯರು ಎಂದಿಗೂ ನೆನಪಿನಲ್ಲಿ ಉಳಿ ಯುತ್ತಾರೆ. ಅವರ ವೇಷ ಭೂಷಣಗಳು, ಅವರು ಧರಿಸುವ ನೇಪಾಳಿ ಟೋಪಿಯು ಅವರಿಗೆ ಒಂದು ಬಗೆಯ ಶೋಭೆಯನ್ನು ಕೊಡುತ್ತದೆ. ಜೀವನದಲ್ಲಿ ಒಮ್ಮೆಯಾದರೂ ನೇಪಾಳಕ್ಕೆ ಹೋಗಿ ಅಲ್ಲಿಯ ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸಬೇಕು. ✽


**ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ (RIMSE)**

**ಯಾದವಗಿರಿ, ಮೈಸೂರು – 570 020**

## ಆಧ್ಯಾತ್ಮಿಕ ಶಿಬಿರ (ಪುರುಷರಿಗಾಗಿ ಆವಾಸಿ ಶಿಬಿರ)

**25 ಜನವರಿ 2023 ರಿಂದ 29 ಜನವರಿ 2023 : ಐದು ದಿನಗಳ ಆಧ್ಯಾತ್ಮಿಕ ಶಿಬಿರ**

ಮಾಧ್ಯಮ: **ಕನ್ನಡ** ಮತ್ತು **ಇಂಗ್ಲಿಷ್**

**ಸೂಚನೆಗಳು**



* ಶುಲ್ಕ: ರೂ 3,000 ಮಾತ್ರ – ಊಟ ಹಾಗೂ ವಸತಿ ಸೌಲಭ್ಯ ಸೇರಿ.
* ಶಿಬಿರದಲ್ಲಿ ಭಾಗವಹಿಸಲು ಮೊದಲು ಸ್ವೀಕರಿಸಿದ ಅರ್ಜಿಗಳಿಗೆ ಆದ್ಯತೆ ಇರುತ್ತದೆ.
* ತುಂಬಿದ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 14 ಜನವರಿ 2023.
* ಶಿಬಿರಾರ್ಥಿಗಳು 25-01-2023 ರಂದು ಸಂಜೆ 5 ಗಂಟೆಯ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರಬೇಕು.
* ಆಧ್ಯಾತ್ಮಿಕ ಶಿಬಿರದಲ್ಲಿ ಭಾಗವಹಿಸುವ ಭಕ್ತರು ಉತ್ತಮ ಆರೋಗ್ಯವನ್ನು ಹೊಂದಿರಬೇಕು.
* ಶಿಬಿರದ ಸಮಯದಲ್ಲಿ ಆಶ್ರಮದ ನೀತಿ-ನಿಯಮಗಳನ್ನು ಪಾಲಿಸುತ್ತ ಆಶ್ರಮದ ಆಧ್ಯಾತ್ಮಿಕ ವಾತಾವರಣಕ್ಕೆ ಧಕ್ಕೆಯಾಗದಂತೆ ನಡೆದುಕೊಳ್ಳಬೇಕು. ಆಶ್ರಮದಲ್ಲಿ ಸಮಯಪ್ರಜ್ಞೆ / ಶಿಸ್ತಿಗೆ ಬಹಳ ಪ್ರಾಮುಖ್ಯತೆಯನ್ನು ನೀಡಲಾಗುವುದು.
* ಶಿಬಿರದ ಎಲ್ಲ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು.
* ಶಿಬಿರದ ವಿವರಗಳನ್ನೊಳಗೊಂಡ ಅರ್ಜಿಗಾಗಿ ಸ್ವ – ವಿಳಾಸವಿರುವ (10cmx23cm) ಲಕೋಟೆಗೆ ರೂ.5/– ಅಂಚೆ ಚೀಟಿಯನ್ನು ಲಗತ್ತಿಸಿ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ:

**ವಿಳಾಸ:** Correspondent, Ramakrishna Institute of Moral and Spiritual Education (RIMSE)
Yadavagiri, Mysuru - 570020 Phone: 0821 – 2417666 / 2412800 Mob No 8861117757
E-mail: mysuru.rimse@rkmm.org Website: www.rimse.org.in